ಗೀತಾಂಜಲಿ ಶ್ರೀಯವರ ಕಾದಂಬರಿ 'ಟೊಂಬ್ ಆಫ್ ಸ್ಯಾಂಡ್' ಬೂಕರ್ ಪ್ರಶಸ್ತಿ ಪಡೆದ ಮೊತ್ತ ಮೊದಲ ಹಿಂದಿಯ ಕೃತಿ ಎನ್ನುವುದಕ್ಕಿಂತಲೂ, ಇತರ ಹಲವಾರು ಕಾರಣಗಳಿಗೆ ಗಮನಾರ್ಹವಾಗಿದೆ, ಅಧ್ಯಯನ ಯೋಗ್ಯವಾಗಿದೆ ಮತ್ತು ಚರ್ಚೆಗೆ ಆಹ್ವಾನವೀಯುವಂಥ ಕೃತಿಯಾಗಿದೆ.

ಗೀತಾಂಜಲಿ ಶ್ರೀ ಅವರ ಹಿಂದಿ ಕಾದಂಬರಿ 'ರೆತ್ ಸಮಾಧಿ'ಯ ಇಂಗ್ಲಿಷ್ ಆವೃತ್ತಿ 'ಟೊಂಬ್ ಆಫ್ ಸ್ಯಾಂಡ್'ನ ಅನುವಾದಕಿ ಡೈಸಿ ರಾಕ್ವೆಲ್ ಈಗಾಗಲೇ ಹಲವಾರು ಹಿಂದಿ ಮತ್ತು ಉರ್ದು ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿದವರು. ಉಪೇಂದ್ರನಾಥ್ ಅಶ್ಕ್ ಅವರ ಆತ್ಮಚರಿತ್ರೆಯೂ ಸೇರಿದಂತೆ ಎಲ್ಲ ಕೃತಿಗಳನ್ನು ಅವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಗೀತಾಂಜಲಿಯವರ ಕಾದಂಬರಿಯಲ್ಲಿ ಮತ್ತೆ ಮತ್ತೆ ಉಲ್ಲೇಖಿಸಲ್ಪಡುವ ಕೃಷ್ಣಾ ಸೋಬ್ತಿ, ಭೀಷ್ಮ ಸಾಹ್ನಿಯವರ ಕೃತಿಗಳ ಅನುವಾದಕಿ ಕೂಡಾ ಡೈಸಿಯವರೇ ಆಗಿರುವುದು ಮತ್ತು ಈ ಕೃತಿಗಳೂ ದೇಶ ವಿಭಜನೆ ಮತ್ತು ತದನಂತರದ ಬೆಳವಣಿಗೆಗಳ ಸುತ್ತ ಇರುವುದು ಇನ್ನೊಂದು ವಿಶೇಷ.

ಗೀತಾಂಜಲಿ ಶ್ರೀಯವರ ಕೃತಿಯ ಜೊತೆಗೆ ಇನ್ನೂ ಐದು ಕಾದಂಬರಿಗಳು ಬೂಕರ್ ಸ್ಪರ್ಧೆಯ ಕೊನೆಯ ಸುತ್ತಿಗೆ ಬಂದಿದ್ದವು. ಅವುಗಳಲ್ಲಿ 2019ರ ನೊಬೆಲ್ ವಿಜೇತೆ ಓಲ್ಗಾ ತೊಕಾರ್ಝುಕ್ ಅವರ ಮಾಸ್ಟರ್ ಪೀಸ್ ಎಂದೇ ಬಹಳ ಪ್ರಶಂಸೆಗೆ ಪಾತ್ರವಾಗಿರುವ 'ದ ಬುಕ್ ಆಫ್ ಜೇಕಬ್' ಕೂಡ ಇತ್ತು. ಪಾಶ್ಚಾತ್ಯ ಓದುಗರ ಮೆಚ್ಚಿನ ಆಯ್ಕೆಯಾಗಿ ಅಲ್ಲಲ್ಲಿ ಕಂಡುಬರುತ್ತಿದ್ದ ಕೃತಿ 'ಕರ್ಸ್ಡ್ ಬನ್ನಿ' ಆಯ್ಕೆಯಾಗಿಯೇ ಬಿಟ್ಟಿತು ಎನ್ನುವ ಸ್ಥಿತಿಯೂ ಇತ್ತು. ಈಗಾಗಲೇ ಸರಣಿಯಲ್ಲಿ ಎರಡು ಕಾದಂಬರಿಗಳನ್ನು ತಂದಿದ್ದ ಯಾನ್ ಫಾಸಾನ ಮೂರನೇ ಸರಣಿ ಕೃತಿ 'ಎ ನಿವ್ ನೇಮ್'ಗೆ ಕೂಡಾ ತನ್ನದೇ ಆದ ಕಾರಣಗಳಿಗಾಗಿ ಈ ಸ್ಪರ್ಧೆಯಲ್ಲಿ ಹೆಚ್ಚಿನ ಮಹತ್ವವಿತ್ತು. ಹಾಗಿದ್ದೂ 'ಟೊಂಬ್ ಆಫ್ ಸ್ಯಾಂಡ್' ಕೃತಿಗೆ ಮನ್ನಣೆ ದೊರೆತಿರುವುದು ಸಹಜವಾಗಿದೆ. ಬಹುಶಃ ಅದು ಈ ಕೃತಿಯ ಸರಳವಾಗಿ, ಕ್ಷಿಪ್ರವಾಗಿ ಗ್ರಹಿಸಲಾಗದ ಸಂಕ್ಲಿಷ್ಟ ಗುಣಗಳಿಗೆ ಸಂದ ಗೌರವವಾಗಿದೆ.

ಈ ಕೃತಿ ಕಾಲನಿಷ್ಠವಾದ ಕೃತಿಯೇನಲ್ಲ. ಹಾಗಾಗಿ, ದೇಶ ವಿಭಜನೆಯೊಂದಿಗೆ ಇದನ್ನು ಸುಲಭವಾಗಿ ಗಂಟು ಹಾಕುವುದು ತಪ್ಪಾಗುತ್ತದೆ. ಈ ಕೃತಿಯ ಪಾತ್ರಗಳು ಕೇವಲ ಒಂದು ಕುಟುಂಬಕ್ಕೆ ಸೇರಿದವಲ್ಲ. ಸಾಹಿತ್ಯ ಕ್ಷೇತ್ರದ ಹಲವಾರು ಬರಹಗಾರರು, ಅವರ ಕೃತಿಗಳು ಇಲ್ಲಿ ಪಾತ್ರವಹಿಸಿವೆ. ಹಾಗೆಯೇ, ನಿಸರ್ಗ, ಬಹುಮುಖ್ಯವಾಗಿ ಹಕ್ಕಿಗಳು, ಚಿಟ್ಟೆಗಳು, ಕಾಮನಬಿಲ್ಲು, ಸೂರ್ಯ, ಮರಗಳು ಇಲ್ಲಿ ಪಾತ್ರವಹಿಸಿವೆ. ದೇಶಗಳ ಗಡಿರೇಖೆಗಳು ಇಲ್ಲಿ ಮುಖ್ಯವಾಗುವುದೇ ಇಲ್ಲ ಎನ್ನುವ ಮಾತು ಕೇವಲ ಪಾಕಿಸ್ತಾನಕ್ಕೆ ಸಂಬಂಧಿಸಿದ್ದಲ್ಲ, ಇಡೀ ಜಗತ್ತನ್ನು ಈ ಕೃತಿ ತನ್ನ ರಂಗಭೂಮಿಯೆಂದು ಸ್ವೀಕರಿಸಿದೆ. ಹಾಗೆಯೇ, ಭಾಷೆಯ ವಿಚಾರಕ್ಕೆ ಬಂದರೆ ಇಲ್ಲಿ ನಮಗೆ ಹಿಂದಿ, ಸಂಸ್ಕೃತ, ಉರ್ದು, ಪಂಜಾಬಿ ಎಲ್ಲ ಭಾಷೆಗಳಿಂದಲೂ ಎತ್ತಿಕೊಂಡ ಮಾತು, ನುಡಿಗಟ್ಟು, ಅಡುಗೆ, ಬಟ್ಟೆಬರೆ, ಸಿನಿಮಾ, ಹಂಪಿಯಂಥ ಸ್ಥಳ ಇತ್ಯಾದಿಗಳನ್ನು ಒಳಗುಗೊಂಡು ಬಂದಿದೆ. ಕೃತಿಯ ಕೇಂದ್ರ ಎನ್ನಬಹುದಾದ 'ಗಡಿ' ಎಂಬ ಶಬ್ದ ಕೇವಲ ಮನುಷ್ಯ ಭೂಮಿಯ ಮೇಲೆ ಎಳೆದ ಗೆರೆಗಳಿಗೆ ಅನ್ವಯವಾಗಿ ನಿಲ್ಲುವಂಥದ್ದಲ್ಲ. ಅದು ಲಕ್ಷ್ಮಣ ಎಳೆದ ಗೆರೆಯಿಂದ ತೊಡಗಿ ದೇಶ ವಿದೇಶ ಪರಿಕಲ್ಪನೆಯ ಗಡಿರೇಖೆಗಳನ್ನು ದಾಟಿ ಮನುಷ್ಯನ ದೇಹಕ್ಕೆ, ಲಿಂಗಕ್ಕೆ, ಒಂದು ಮನೆಯ ಗೋಡೆ ಮತ್ತು ಬಾಗಿಲುಗಳಿಗೆ, ಸಂಪ್ರದಾಯ–ಪರಂಪರೆಗಳಿಗೆ, ಭೂಮಿ–ಬಾನುಗಳಿಗೆ, ಮನಸ್ಸಿನ ಗಡಿರೇಖೆಗಳಿಗೆ ತನ್ನ ಮುಕ್ತಬಾಹುಗಳನ್ನು ಚಾಚುತ್ತದೆ, ಸದಾ ದಾಟುವುದಕ್ಕೆ, ಹಾರುವುದಕ್ಕೆ ತುಡಿಯುತ್ತದೆ. ಇನ್ನು ಈ ಕೃತಿ ಗಂಡ–ಹೆಂಡತಿಯ ಸಂಬಂಧಕ್ಕೆ ಗಂಡು–ಗಂಡು, ಹೆಣ್ಣು–ಹೆಣ್ಣು ಸಂಬಂಧದ ಪರಿಪ್ರೇಕ್ಷ್ಯಗಳನ್ನು ಒಡ್ಡುವಂತೆಯೇ ತಾಯಿ ವೃದ್ಧಾಪ್ಯದಲ್ಲಿ ಮತ್ತೆ ತನ್ನ ಮಗಳಿಗೇ ಕೂಸಾಗುವ, ಕೂಸು ಮಗಳಾಗುವ, ಮಗ ತಂದೆಯಾಗುವ, ತಂದೆ ಮಗುವಾಗುವ, ಕಾಗೆಯೊಂದು ಪಿತೃವಾಗುವ, ಪಿತೃ ಮೃತ್ಯುವಾಗುವ, ಪುರಾಣ ವರ್ತಮಾನವಾಗುವ, ವರ್ತಮಾನ ಕಟ್ಟುಕತೆಯಾಗುವ ಪರಿಪ್ರೇಕ್ಷ್ಯಗಳನ್ನೆಲ್ಲ ಒಡ್ಡುತ್ತ ಈ ಬದುಕು ಹೇಗೆ ಅರ್ಥಹೀನ ಮತ್ತು ಅದೇ ಕ್ಷಣಕ್ಕೆ